ಹರಡಿರುವ ಗಂಧದಕಡ್ಡಿಯ ಸುವಾಸನೆ, ಅತ್ತಿತ್ತ ಕಣ್ಣು ಹಾಯಿಸಿದರೆ ಪಂಚೆ ಉಟ್ಟುಕೊಂಡು ಸದ್ಗುಣಿಗಳಂತೆ ಓಡಾಡುತ್ತಿರುವ ಪಾಪ ಎನ್ನಿಸುವ ಹುಡುಗರು, ಎಲ್ಲಾ ರೂಮುಗಳಿಗೂ ಕಬ್ಬಿಣದ ಮಂಚ ಮತ್ತು ರೀಡಿಂಗ್ ಟೇಬಲ್ಲುಗಳು, ಅಡುಗೆಮನೆಯಿಂದ ತಿಳಿಸಾರಿಗೆ ಹಾಕಿದ ಇಂಗಿನ ಪರಿಮಳ! ಇದನ್ನೆಲ್ಲಾ ನೋಡಿದ ಯಾವನಾದರೂ ರಪಕ್ಕಂತ 'ಅಡ್ಮಿಷನ್ ಫಾರ್ಮ್ ಕೊಡಿ' ಎಂದು ಇಸ್ಕೊಂಡು ಬ್ಯಾಗ್ ಎತ್ತಿಕೊಂಡು ಧಾವಿಸಿ ಬಂದುಬಿಡುವುದಿಲ್ಲವೇ? ಎಲ್ಲಾ ಕಣ್ಕಟ್ಟು, ಎಲ್ಲಾ ಮಾಯೆ!.

ಕುಕ್ಕರುಗಾಲಿನಲ್ಲಿ ಕೂತು ಬಕಾಸುರನ ಹೊಟ್ಟೆಯಂತಹ ಒಲೆಗೆ ಒಂದಾದ ಮೇಲೊಂದರಂತೆ ಕಾಯಿಮೊಟ್ಟೆಯನ್ನು ಎಸೆಯುತ್ತಾ ಸಂದೀಪ ಯೋಚಿಸುತ್ತಿದ್ದ. ಒಲೆಯ ಪೂರ್ತಿ ಒಂದು ಸಾಸಿವೆಕಾಳಿಗೂ ಜಾಗವಿಲ್ಲದಷ್ಟು ಉರುವಲು ತುಂಬಿಸಿದ ಮೇಲೆ ಪೇಪರ್ ತುಂಡನ್ನು ಒಂದು ಕಾಯಿಮೊಟ್ಟೆಯ ಮೇಲೆ ಇಟ್ಟು ಕಡ್ಡಿ ಗೀರಿ ಬೆಂಕಿ ಹೊತ್ತಿಸಿದ. ಇದ್ದಕ್ಕಿದ್ದಂತೇ ಟಕ್ ಎಂಬ ಸದ್ದು. ಇಲ್ಲ, ಒಲೆಯ ಒಳಗಿನ ಸದ್ದಲ್ಲ. ಬೆಚ್ಚಿದವನು ಕರಿ ಬೆಕ್ಕೇನಾದರೂ ಬಂತೇ ಎಂದು ಒಮ್ಮೆಗೇ ಎದ್ದ. ಕರಿ ಬೆಕ್ಕೇನೂ ಬಂದಿರಲಿಲ್ಲ. ನಟೇಶ ಟಾಯ್ಲೆಟ್ಟು ಮುಗಿಸಿ ಬಾಗಿಲು ತೆರೆದುಕೊಂಡು ಹೊರಗೆ ಬಂದಿದ್ದ. ಇವನು ಎದ್ದಿದ್ದನ್ನು ನೋಡಿ ಮುಖದ ಯಾವುದೇ ನರವನ್ನೂ ಕೊಂಕಿಸದೇ 'ನೀರ್ ಕಾದ್ ಮೇಲ್ ಹೇಳು ಮಾರೇ' ಎಂದು ಹೇಳಿ, ಮೊದಲ ಬಾತ್ರೂಮಿನಲ್ಲಿ ಕೈ ತೊಳೆದು ಅಲ್ಲಿಂದ ಹೊರಟುಹೋದ. ನಾನು ಸ್ಟೋರ್ ರೂಮಿನಿಂದ ಒಂದು ಬುಟ್ಟಿಯ ತುಂಬಾ ಕಾಯಿಮೊಟ್ಟೆಯನ್ನು ತುಂಬಿಸಿಕೊಂಡು ಬಂದು ಒಲೆಗೆ ತುಂಬಿಸಿ ಮತ್ತೆ ಹೋಗಿ ಇನ್ನೊಂದು ಬುಟ್ಟಿ ತುಂಬಿಸಿಕೊಂಡು ಬಂದು ಹಾಕುವವರೆಗೂ ಈ ಹುಡುಗ ನನ್ನಿಂದ ಹತ್ತು ಹದಿನೈದು ಮೀಟರ್ ವ್ಯಾಪ್ತಿಯೊಳಗೇ ಇದ್ದ ಎಂಬುದು ಗೊತ್ತೇ ಆಗಿರಲಿಲ್ಲವಲ್ಲಾ! ಒಂದೇ ಒಂದು ಸಣ್ಣ ಸದ್ದೂ ಇಲ್ಲ! ಟಾಯ್ಲೆಟ್ಟಿನಲ್ಲೂ ಸದ್ದು ಮಾಡದ ಅದೆಂಥಾ ದುರದೃಷ್ಟಕರ ಜೀವನ ಅವನದು?!. ಆ ಕರಿ ಬೆಕ್ಕೂ ಅವತ್ತು ಹೀಗೇ ಅಲ್ಲವೇ ಸಡನ್ನಾಗಿ ಎದುರು ಬಂದಿದ್ದು?! ಒಂದೇ ಒಂದು ಸಣ್ಣ ಹೆಜ್ಜೆ ಸದ್ದಿರಲಿಲ್ಲ, ಒಂದು ಸಣ್ಣ ಮಿಯಾಂವ್ ಇರಲಿಲ್ಲ, ಮೆಟ್ಟಿಲಿಳಿದು ನಾನು ಉದ್ದಕ್ಕಿರುವ ಬಾತ್ರೂಮು ಟಾಯ್ಲೆಟ್ಟುಗಳ ಸಾಲಿನ ಬಳಿ ಬರುವವರೆಗೂ ಅಲ್ಲಿ ಇನ್ನೊಂದು ಜೀವ ಇರಬಹುದೆಂಬ ಸಣ್ಣ ಸುಳಿವೂ ಸಿಕ್ಕಿರಲಿಲ್ಲ. ಆ ಮಧ್ಯರಾತ್ರಿಯ ಮುಖಾಮುಖಿ ಭೀಕರ. ಒಂದು ಬದಿಯಲ್ಲಿ ಬಾತ್ರೂಮಿನ ಸಾಲು, ಮತ್ತೊಂದು ಬದಿಯಲ್ಲಿ ಟಾಯ್ಲೆಟ್ಟಿನ ಸಾಲು, ಮಧ್ಯದ ಕೊಳವೆಯಂತಹಾ ಓಣಿಯ ಒಂದು ತುದಿಯಲ್ಲಿ ನಾನು, ಮತ್ತೊಂದು ತುದಿಯಲ್ಲಿ ಆ ಕರಿ ಬೆಕ್ಕು!. ಅದರ ಕಣ್ಣಿನಲ್ಲಿ ಆ ಕ್ಷಣದಲ್ಲಿ ಇದ್ದದ್ದು ಅದೆಂಥದದು?! ಅದು ಅಚ್ಚರಿಯಲ್ಲ, ಗಾಬರಿಯಲ್ಲ, ಪ್ರಶ್ನೆಯೂ ಅಲ್ಲ. ಅದು ಉತ್ತರ. ನನಗೆಲ್ಲಾ ಗೊತ್ತು ಎಂಬ ಆ ನೋಟ. ಅದಕ್ಕೆ ಹೇಗೆ ಗೊತ್ತಾಯಿತು?!. ಕಾಯಿಮೊಟ್ಟೆಗೆ ಬೆಂಕಿ ಹತ್ತಿಕೊಂಡು ಚರಪರ ಸದ್ದು ಶುರುವಾಗಿತ್ತು. ಇನ್ನೇನು ಕೆಲಸವಿಲ್ಲ, ಒಂದರಿಂದ ಒಂದಕ್ಕೆ ಅಂಟಿಕೊಂಡು ಬೆಂಕಿ ಇಡೀ ಒಲೆಯ ಒಡಲನ್ನೇ ಕೆಂಡವಾಗಿಸುತ್ತದೆ. ಒಂದು ಕಿಡಿಯಿಂದ ಜಗತ್ತನ್ನೇ ಹೊತ್ತಿಸಬಹುದು, ಒಂದು ಹನಿಯಿಂದ ಏನನ್ನೂ ಆರಿಸಲಾಗುವುದಿಲ್ಲ ಅಲ್ಲವೇ? ಹತಾಶೆಯಿಂದ ಒಲೆಯ ಕಬ್ಬಿಣದ ಬಾಗಿಲನ್ನು ಮುಚ್ಚುವಾಗ ಸಂದೀಪ ನೇಗಿಲಿನಿಂದ ಭೂಮಿಯ ಮೇಲಾದ ಕುಳಿಗಳಂತೆ ತನ್ನ ಎಡಗೈಯ ಮೇಲೆ ನಾವು ಒಣಗುವುದೇ ಇಲ್ಲ ಎಂಬಂತೆ ಇನ್ನೂ ಹಸಿಯಾಗಿಯೇ ಇರುವ ಮೂರು ಗೀರುಗಳನ್ನು ಒಮ್ಮೆ ನೋಡಿಕೊಂಡ.

ಕಿರೇಮಗಳೂರಿನ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಡಕ್ಷನ್ ಡೇ ಮುಗಿಸಿಕೊಂಡು ಓಮ್ನಿ ಗಾಡಿಯಲ್ಲಿ ತಂದಿದ್ದ ಎರಡು ಸಿಂಗಲ್ ಬೆಡ್ಡುಗಳು, ಬಕೆಟ್ಟು-ಚೊಂಬು, ಬೆಡ್‌ಶೀಟು, ರಗ್ಗು, ನೂರೈವತ್ತು ಬಟ್ಟೆಗಳು, ದೇವರ ಫೋಟೋ ಎಲ್ಲವನ್ನೂ ಹಾಸ್ಟೆಲ್ಲಿನೆದುರು ಇಳಿಸಿ ಭರತ ಮತ್ತು ಸಂದೀಪನ ತಂದೆಯರು ಒಳಗೂ ಬರದೇ 'ಬೇಗ್ ಹೋಗೂಣ, ನಾವ್ ಇಲ್ದೇ ಇದ್ರೆ ಹೆಂಗೆಂಗೋ ಔಷಧಿ ಹೊಡೀತಾವೆ' ಎಂದು ಅವಸರಿಸುತ್ತಾ ಎದುರಿರುವ ತಮ್ಮ ಬೆಳೆಗಿಂತ ಊರಲ್ಲಿರುವ ಬೆಳೆ ಮುಖ್ಯ ಎನ್ನುವಂತೆ ಸರಭರವೆಂದು ಊರಿಗೆ ವಾಪಸ್ ಹೋಗಿದ್ದರು. ಮೊದಲ ದಿನವೇ ಕಾಲೇಜಿಗೆ ಬರುವಷ್ಟು ನಿಷ್ಠಾವಂತರು ಇವರಿಬ್ಬರೇ ಆಗಿದ್ದರಿಂದ ಹಾಸ್ಟೆಲ್ಲಿನಲ್ಲಿ ಉಳಿದ ಜ್ಯೂನಿಯರುಗಳು ಇನ್ನೂ ಬಂದಿರಲಿಲ್ಲ. ಇಬ್ಬರೇ ಒದ್ದಾಡಿಕೊಂಡು ಕಂಕುಳಲ್ಲಿ ಕೊಡಗಳನ್ನು ಹಿಡಿದುಕೊಂಡಂತೆ ಸಾಮಾನು